ಆ) ಆ ಬಗ್ಗೆ ಸರ್ಕಾರ ಶೀಘ್ರ ಕ್ರಮ ಕೈಗೊಳ್ಳುವುದೇ;

ಇ) ಕನ್ನಡ ಮಾಧ್ಯಮ ಕಡ್ಡಾಯವಾಗುವಂತೇ ದಕ್ಷಿಣ ಕನ್ನಡ ಜಿಲ್ಲೆಗೆ ವಿನಾಯತಿ ನೀಡಲಾಗುವುದೇ?

ಅ)

ಅರ್ಜಿಗಳ ಸಂಖ್ಯೆ	
ಪ್ರಾಥಮಿಕ ಶಾಲೆಗೆ	- 32
ಪ್ರೌಢ ಶಾಲೆಗೆ	- 07

ಆ) ಆಂಗ್ಲ ಮಾಧ್ಯಮ ಶಾಲೆಗಳ ಸಮಸ್ಯೆ ಬಗ್ಗೆ ಸರ್ಕಾರವು ತಜ್ಞರ ಸಮಿತಿಯ ವರದಿಯನ್ನು ಪಡೆದಿದೆ. ಅದನ್ನು ಪರಿಶೀಲಿಸಲಾಗುತ್ತಿದೆ.

ಇ) ಇಲ್ಲ.

ಕಳೆದ ವರ್ಷ ಅಪಘಾತಕ್ಕೀಡಾದ ರಸ್ತೆ ಸಾರಿಗೆ ಬಸ್ಸುಗಳ ಸಂಖ್ಯೆ

3361 - ಶ್ರೀ ಪಿ.ಸಿ. ಸಿದ್ದನಗೌಡರು (ಕಲಘಟಗಿ) : ಮಾನ್ಯ ಸಾರಿಗೆ ಸಚಿವರು. ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ

ಅ) ಕಳೆದ ವರ್ಷ ಅಪಘಾತಕ್ಕೀಡಾದ ರಸ್ತೆ ಸಾರಿಗೆ ಬಸ್ಸುಗಳ ಸಂಖ್ಯೆ ಎಷ್ಟು? ಹಾಗೂ ಗಲಭೆಗಳಿಂದ ಸುಟ್ಟ ಬಸ್ಸುಗಳ ಸಂಖ್ಯೆ ಎಷ್ಟು?

ಆ) ಅಪಾಘತದಲ್ಲಿ ಸಿಕ್ಕಿದ ಪ್ರಯಾಣಿಕರಿಗೆ ಕಳೆದ ವರ್ಷ ನೀಡಿದ ಪರಿಹಾರದ ಪಣ ಎಷ್ಟು?

ಇ) ಚಾಲಕರು ಪಾನಮತ್ತರಾಗಿ ವಾಹನ ಚಾಲನೆ ಮಾಡುತ್ತಿರುವುದರಿಂದ ಅಪಘಾತಗಳ ಸಂಖ್ಯೆ ಹೆಚ್ಚುತ್ತಿರುವುದನ್ನು ಸರ್ಕಾರವು ಗಮನಿಸಿದೆಯೇ?

ಈ) ಹಾಗಿದ್ದಲ್ಲಿ ಸರ್ಕಾರ ಇದನ್ನು ತಡೆ ಗಟ್ಟಲು ಕೈಗೊಂಡಿರುವ ಕ್ರಮಗಳೇನು?

ಶ್ರೀ ಅಜೀಜ್ ಸೇಠ್ (ಸಾರಿಗೆ ಸಚಿವರು)

ಅ) 2277 ವಾಹನಗಳು ಅಪಘಾತಕ್ಕೀಡಾಗಿರುತ್ತವೆ ಮತ್ತು 8 ವಾಹನಗಳು ಸುಡಲ್ಪಟ್ಟಿವೆ.

ಆ) 438.58 ಲಕ್ಷ ರೂಗಳು.

ಇ) ಇಲ್ಲ.

ಈ) ಉದ್ಭವಿಸುವುದಿಲ್ಲ.

ಕಲಘಟಗಿಯಲ್ಲಿ ಸರ್ಕಾರಿ ಪದವಿ ಕಾಲೇಜನ್ನು ಪ್ರಾರಂಭಿಸುವ ವಿಚಾರ

3313 - ಶ್ರೀ ಪಿ.ಸಿ. ಸಿದ್ದನಗೌಡ (ಕಲಘಟಗಿ) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಟ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ

ಅ) ಧಾರವಾಡ ಜಿಲ್ಲೆಯ ಕಲಘಟಗಿಯಲ್ಲಿ ಸರ್ಕಾರಿ ಪದವಿ ಕಾಲೇಜನ್ನು ಪ್ರಾರಂಭಿಸುವ ವಿಚಾರ ಸರ್ಕಾರದ . ಪರಿಶೀಲನೆಯಲ್ಲಿದೆಯೇ?

ಆ) ಇದ್ದಲ್ಲಿ ಯಾವಾಗ ಪದವಿ ಕಾಲೇಜನ್ನು ಪ್ರಾರಂಭಿಸಲಾಗುವುದು?

ಶ್ರೀ ಎಂ ವೀರಪ್ಪ ಮೋಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು)

ಅ) ಈ ವಿಷಯದಲ್ಲಿ ಯಾವುದೇ ಪ್ರಸ್ತಾವನೆಗಳು ಸರ್ಕಾರಕ್ಕೆ ಬಂದಿರುವುದಿಲ್ಲ